ಮುಳ್ಳುತಂತಿ ಹಾಕ್ಸು, ಇಲ್ಲಾ ಕತ್ತಾಳೆನಾದ್ರು ಹಾಕ್ಸು. ಸ್ವಲ್ಪನಾದ್ರು ಬೆಳೆ ಉಳೀತದೆ' ಎಂದಳು ಶಾರದಮ್ಮ. 'ಅಯ್ಯೋ, ಇರೋ ಒಂದು ಎಕರೆಗೆ ಕತ್ತಾಳೆ ಬೇರೆ ಕೇಡು' ಎಂದು ರಂಗಮ್ಮ ಉತ್ತರಕೊಟ್ಟರೂ, ಅವಳಿಗೆ ಬಾಧಿಸುತ್ತಿದ್ದುದು ಹದ್ದಾಗಲೀ ಅಥವಾ ಹೊಲಕ್ಕೆ ನುಗ್ಗುವ ದನಗಳಾಗಲೀ ಅಲ್ಲ. ರಂಗಮ್ಮನ ಆಲೋಚನೆಯೆಲ್ಲಾ ತನ್ನ ಮಗಳು ಸೌಮ್ಯಳಿಗೆ ವಕ್ಕರಿಸಿದ್ದ ಹೊಸ ಕಾಯಿಲೆಯ ಬಗ್ಗೆಯೇ ಇತ್ತು. ಎಷ್ಟೊಂದು ಚೆಂದಾಗಿ ಓದುತ್ತಿದ್ದ, ತನಗಿದ್ದ ಏಕೈಕ ಆಶಾಕಿರಣವಾದ 'ಸೋಮ್ಯ'ಳಿಗೆ ಬಂದಿರುವ ಕಾಯಿಲೆಯನ್ನು ಯಾವ ರೀತಿ ಗುಣಪಡಿಸಬೇಕೋ ತಿಳಿಯದೆ ರಂಗಮ್ಮ ಒದ್ದಾಡುತ್ತಿದ್ದಳು.

ರಂಗಮ್ಮನನ್ನು ಲಿಂಗ ಮದುವೆಯಾಗಿ, ಕೈಗೊಂದು ಮಗು ಕೊಟ್ಟು, ಊರುಬಿಟ್ಟು ಓಡಿಹೋದ ಮೇಲೆ ರಂಗಮ್ಮನೇ ಆ ಹೆಣ್ಣುಮಗುವಿಗೆ ತಂದೆ ತಾಯಿ ಎರಡೂ ಆಗಿ ಸಾಕಿದ್ದಳು. ರಂಗಮ್ಮನನ್ನು ಲಿಂಗ ಮದುವೆಯಾಗಿ ಊರಿಗೆ ಕರೆದುಕೊಂಡು ಬಂದಾಗ ಅವಳ ಸೌಂದರ್ಯಕ್ಕೆ ಊರಿಗೇ ಊರೇ ಬೆರಗಾಗಿತ್ತು. ಎಡಬಿಡಂಗಿ ಲಿಂಗನಿಗೆ ಇಂತಹ ಸುಂದರ ಹೆಂಡತಿಯೇ? ಎಂದು ಊರಿನ ಯುವಕರು, ಮಧ್ಯ ವಯಸ್ಕರೆಲ್ಲಾ ತಮ್ಮ ದೌರ್ಭಾಗ್ಯ ನೆನೆದು ನಿಟ್ಟುಸಿರುಬಿಟ್ಟಿದ್ದರು. ಆದರೆ ಇಂತಹ ಸುಂದರಿಯ ಜೊತೆಗೆ ಸಂಸಾರ ಮಾಡುವಷ್ಟು ಯೋಗ್ಯತೆ ಲಿಂಗನಿಗಿರಲಿಲ್ಲ. ಮೊದಮೊದಲು ಹೆಂಡತಿಯ ಸೌಂದರ್ಯವನ್ನು ಹೊಗಳಿದರೆ ಖುಷಿಯಾಗುತ್ತಿದ್ದವನು, ಬರುಬರುತ್ತಾ ಹೊಗಳುವವರ ಮೇಲೆ ರೇಗತೊಡಗಿದ. ಅವಳು ಯಾರೊಂದಿಗಾದರೂ ಮಾತನಾಡಿದರೆ, ಮುಖ ನೋಡಿದರೆ ಅನುಮಾನಪಡತೊಡಗಿದ. ಅವಳ ಮೇಲೆ ಸಂಶಯಗಳು ಜಾಸ್ತಿಯಾದಂತೆ ಅವನ ಕುಡಿತವೂ ಜಾಸ್ತಿಯಾಗತೊಡಗಿತು. ಕುಡಿದಾಗ ಕೆಲವು ಗೆಳೆಯರು ಇವನ ಮನೆಯ ಹತ್ತಿರ ಬಂದು ರಂಗಮ್ಮನೊಂದಿಗೆ ಸಲಿಗೆ ಬೆಳೆಸಲು ಹೋಗಿ ಅವಳಿಂದ ಪೊರಕೆ ಸೇವೆ, ಮೆಟ್ಟಿನೇಟು ತಿಂದು ಓಡಿಹೋಗಿದ್ದರು. ಲಿಂಗನಿಗೆ ಕೂಲಿ ಮಾಡಲು ಮೈಬಗ್ಗುತ್ತಿರಲಿಲ್ಲ. ತಂದೆಯಿಂದ ಬಂದ ಒಂದು ಎಕರೆ ಖುಷ್ಕಿ ಜಮೀನಿದ್ದರೂ, ಅದರಿಂದ ಅಂತಹ ಆದಾಯವೇನೂ ಬರುತ್ತಿರಲಿಲ್ಲ. ಮನೆಯಲ್ಲಿದ್ದ ಅಲ್ಪಸ್ವಲ್ಪ ದುಡ್ಡು, ಒಡವೆ ಎಲ್ಲಾ ಸಾರಾಯಿ ಅಂಗಡಿಯವರ ಪಾಲಾದವು. ಈ ಮಧ್ಯೆ ರಂಗಮ್ಮ ಹೆಣ್ಣುಮಗುವನ್ನು ಹಡೆದಳು. ಆ ಮಗೂ ಕೂಡ ರಂಗಮ್ಮಳಂತೆ ಬೆಳ್ಳಗೆ ಮುದ್ದಾಗಿತ್ತು. ಈ ಮಧ್ಯೆ ಲಿಂಗನು ಆ ಬೆಳ್ಳನೆಯ ಮಗು ಕಪ್ಪಗಿರುವ ತನಗೆ ಹುಟ್ಟಿದ್ದಲ್ಲ ಎಂಬ ಹೊಸ ವರಸೆ ಶುರುಹಚ್ಚಿಕೊಂಡ. ಕುಡಿದು ಬಂದಾಗ ರಂಗಮ್ಮಳನ್ನು ಹಿಡಿದು ಬಡಿಯುತ್ತಿದ್ದ. ತನ್ನದಲ್ಲದ ಮಗು ಈ ಮನೆಯಲ್ಲಿ ಇರಕೂಡದು ಎಂದು ಒಂದು ದಿನ ಮಗುವನ್ನು ಎತ್ತಿ ಹೊರಗೆ ಎಸೆಯಲು ಬಂದಾಗ ರಂಗಮ್ಮನ ಸಹನೆಯ ಕಟ್ಟೆ ಒಡೆಯಿತು. ನಡುಬೀದಿಯಲ್ಲಿ ಗಂಡನೆಂದೂ ನೋಡದೆ ರಂಗಮ್ಮನು ಲಿಂಗನನ್ನು ಪೊರಕೆಯಿಂದ ಮುಖಮೂತಿ ನೋಡದೆ ಚಚ್ಚಿದಳು. ಈ ಕಾರ್ಯಕ್ರಮವನ್ನು ಇಡೀ ಹಳ್ಳಿಯ ಜನ ತಮ್ಮ ಕೆಲಸಗಳನ್ನೆಲ್ಲಾ ಬದಿಗೊತ್ತಿ ಬಂದು ಕಣ್ಣು ತುಂಬಿಕೊಂಡರು. ಊರ ಜನರ ಮುಂದೆ ತನ್ನ ಮರ್ಯಾದೆ ಹೋಯಿತು ಎಂದು ಎದ್ದು ಎಲ್ಲಿಗೋ ಓಡಿಹೋದ ಲಿಂಗ, ಮತ್ತೆ ಊರಿನ ಕಡೆ ತಲೆ ಹಾಕಲಿಲ್ಲ. ಹೀಗಾಗಿ ಮಗುವನ್ನು ಸಾಕುವ, ಸಂಸಾರ ತೂಗಿಸುವ ಜವಾಬ್ದಾರಿ ರಂಗಮ್ಮನ ಮೇಲೆಯೇ ಬಿತ್ತು. ಅಳ್ಳೆದೆಯ ಬೇರೆ ಯಾರಾದರೂ ಆಗಿದ್ದರೆ ಈ ಪರಿಸ್ಥಿತಿಯಲ್ಲಿ ಕೆರೆಯೋ ಬಾವಿಯೋ ನೋಡಿಕೊಳ್ಳುತ್ತಿದ್ದರು. ಆದರೆ ರಂಗಮ್ಮ ನಿಜಕ್ಕೂ ಗಟ್ಟಿಗಿತ್ತಿ. ತನ್ನದಲ್ಲದ ತಪ್ಪಿಗೆ ತಾನು ಮತ್ತು ತನ್ನ ಮಗುವೇಕೆ ಸಾಯಬೇಕು? ತನ್ನ ಕಷ್ಟಗಳನ್ನು ಕಂಡು ನಕ್ಕವರ ಮುಂದೆಯೇ ತಾನು ಬದುಕಿ ತೋರಿಸಬೇಕು ಎಂದು ನಿರ್ಧರಿಸಿದಳು. ತಾನು ಹೀಗೆಯೇ ಮೆತ್ತಗಿದ್ದರೆ ಎಲ್ಲರೂ ತನ್ನನ್ನು ಜೇಡಿಮಣ್ಣು ಮಾಡಿಕೊಂಡು ತುಳಿಯುತ್ತಾರೆ, ಒಂಟಿ ಹೆಂಗಸಾದ ತನ್ನನ್ನು ಅಡ್ನಾಡಿ ಗಂಡಸರು ಊರ ಸೂಳೆ ಮಾಡಿಕೊಳ್ಳುತ್ತಾರೆ, ಎಂದು ರಂಗಮ್ಮನು ಅಂದಿನಿಂದ ತನ್ನ ನಡವಳಿಕೆ, ಮಾತುಗಳನ್ನು ಬದಲಾಯಿಸಿಕೊಂಡಳು. ತನ್ನನ್ನು ಕೆಣಕಿದವರನ್ನು ಬೀದಿಯಲ್ಲಿ ನಿಂತುಕೊಂಡು ನಾಚಿಕೆ, ಹಿಂಜರಿಕೆಯನ್ನು ಬಿಟ್ಟು ಅವಾಚ್ಯ ಶಬ್ದಗಳಿಂದ ಹೀನಾಯವಾಗಿ ನಿಂದಿಸುವುದು ಮಾಡತೊಡಗಿದಳು. ಸಹಾಯಹಸ್ತ ಚಾಚುವ ನೆಪದಲ್ಲಿ ತನ್ನೊಂದಿಗೆ ಸಲಿಗೆ ಬೆಳೆಸಲು ಮನೆಯ ಹತ್ತಿರ ಸುಳಿದಾಡುವವರನ್ನು ಹದ್ದುಬಸ್ತಿನಲ್ಲಿಡಲು ತನ್ನ ನಾಲಿಗೆಯನ್ನು